ಉಳಿದವರು ಜೀವನ್ಮೃತರು" ಎನ್ನುವ ಕ್ರಾಂತಿಕಾರಕ ನಿಲುವನ್ನು ಪ್ರತಿಪಾದಿಸಿದರು. **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ಸೂತ್ರವನ್ನು ಪ್ರತಿಪಾದಿಸಿದರಲ್ಲದೆ, **'ದರಿದ್ರದೇವೋ ಭವ'** ಎಂದು ಸಾರುವ ಮೂಲಕ ಈ ದೇಶದ ದೀನದಲಿತರನ್ನು ನಿಮಿಷದಲ್ಲಿ ದೈವತ್ವಕ್ಕೇರಿಸಿದರು. ಅವರದು ಅಂತರಂಗದಲ್ಲಿ ತಪಸ್ಸು, ಬಹಿರಂಗದಲ್ಲಿ ಕರ್ಮಯೋಗ. ಹೀಗೆ ಸ್ವಾಮಿ ವಿವೇಕಾನಂದರದು ಪದ್ಮಪತ್ರದಂಥ ನಿರ್ಲಿಪ್ತತೆ; ಅಂತೆಯೇ ಸಾಮಾಜಿಕ ಉನ್ನತಿಗಾಗಿ ನಿಶ್ಚಲ ಮನೋವೃತ್ತಿ ಹಾಗೂ ಸರ್ವ ಲೋಕಹಿತ ಪ್ರಜ್ಞೆಯ ದೃಢ ಸಂಕಲ್ಪ.

ಧರ್ಮದ ಬಗ್ಗೆ ಸ್ವಾಮಿ ವಿವೇಕಾನಂದರ ಕೆಲವು ಪ್ರಸಿದ್ಧ ಅನಿಸಿಕೆಗಳು ಹೀಗಿವೆ:

"ಧರ್ಮದ ರಹಸ್ಯವಿರುವುದು ಸಿದ್ಧಾಂತಗಳಲ್ಲಲ್ಲ; ಅದರ ಅನುಷ್ಠಾನದಲ್ಲಿ. ಒಳ್ಳೆಯವರಾಗಿರುವುದು, ಒಳ್ಳೆಯದನ್ನು ಮಾಡುವುದು - ಇದೇ ಧರ್ಮದ ಸಾರಸರ್ವಸ್ವ. "

"ಧರ್ಮದ ವಿಷಯದಲ್ಲಿ ಎಂದೂ ಜಗಳ ಕಾಯಬೇಡಿ. ಭಾರತೀಯರು ನಾವು; ಭಾರತೀಯರೆಲ್ಲ ನಮ್ಮ ಸಹೋದರರು."

"ಇಡೀ ವಿಶ್ವ ಭಾರತದತ್ತ ಕಣ್ತೆರೆಯಲಿದೆ. ಯಾವುದಕ್ಕಾಗಿ? ಆಧ್ಯಾತ್ಮಿಕ, ಧಾರ್ಮಿಕ ಪ್ರಸಾರಕ್ಕಾಗಿ."

ಸ್ವಾಮೀಜಿ ಹೇಳುತ್ತಾರೆ, "ಮಾನವ ಜನಾಂಗಕ್ಕೆ ಆದರ್ಶವೆನ್ನುವುದು ಯಾವುದಿದೆಯೋ, ಅತ್ಯುತ್ತಮವೆನ್ನುವುದು ಯಾವುದಿದೆಯೋ, ಅದು ಇಲ್ಲಿದೆ; ಈ ನಾಡಿನ ಕಣಕಣದಲ್ಲಿದೆ."

"ಸ್ವಾರ್ಥದಿಂದ ಸಾಮರ್ಥ್ಯ ಕುಸಿದರೆ, ಆತ್ಮಸಂಯಮದಿಂದ ಶಕ್ತಿಸಂಚಯ. ಸ್ವಾರ್ಥವೇ ಪಾಪ; ನಿಃಸ್ವಾರ್ಥವೇ ಪುಣ್ಯ. ನಿಃಸ್ವಾರ್ಥಕಾರ್ಯದಿಂದ ನಿಷ್ಕಾಮ ಭಾವ."

"ಇತರರಿಗೆ ಒಳ್ಳೆಯದನ್ನು ಮಾಡುವುದೇ ಧರ್ಮ; ಜನರನ್ನು ಹಿಂಸಿಸುವುದೇ ಅಧರ್ಮ. ಪೌರುಷ ಮತ್ತು ಶಕ್ತಿ ಇವೇ ಧರ್ಮ; ಹೇಡಿತನ ಮತ್ತು ದೌರ್ಬಲ್ಯವೇ ಅಧರ್ಮ. "

"ಮನುಷ್ಯರಿಗೆ ಶಾಂತಿ ನೆಮ್ಮದಿಯನ್ನು ತರುವುದೇ ಧರ್ಮದ ಮೂಲ ಉದ್ದೇಶ."

ಸ್ವಾಮೀಜಿಯವರು ಶಿಕಾಗೋದ ಧರ್ಮಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಆಡಿದ ಕೆಳಕಂಡ ಮಾತುಗಳು ಗಮನಾರ್ಹ:

"ಜಗತ್ತಿಗೆ ಸಹಿಷ್ಣುತೆಯನ್ನೂ, ಸರ್ವಧರ್ಮ ಸ್ವೀಕಾರಭಾವವನ್ನೂ ಬೋಧಿಸಿದ ಧರ್ಮಕ್ಕೆ ಸೇರಿದವನು ನಾನೆಂಬ ಹೆಮ್ಮೆ ನನ್ನದು. ನಾವು ಸರ್ವಮತ ಸಹಿಷ್ಣುತೆಯನ್ನು ಒಪ್ಪುತ್ತೇವಷ್ಟೇ ಅಲ್ಲದೆ, ಸಕಲ ಧರ್ಮಗಳೂ ಸತ್ಯವೆಂದು ನಂಬುತ್ತೇವೆ. ಪ್ರಪಂಚದ ಎಲ್ಲ ಧರ್ಮಗಳ, ಎಲ್ಲ ರಾಷ್ಟ್ರಗಳ ಸಂಕಟಪೀಡಿತ ನಿರಾಶ್ರಿತರಿಗೆ ಆಶ್ರಯವನ್ನಿತ್ತ ರಾಷ್ಟ್ರಕ್ಕೆ ಸೇರಿದವನೆಂಬ ಹೆಮ್ಮೆ ನನ್ನದು.

"ರೋಮನ್ನರ ದಬ್ಬಾಳಿಕೆಗೆ ಗುರಿಯಾಗಿ ತಮ್ಮ ಪವಿತ್ರ ದೇವಾಲಯವು ನುಚ್ಚುನೂರಾದಾಗ ದಕ್ಷಿಣ ಭಾರತಕ್ಕೆ ವಲಸೆ ಬಂದ ಇಸ್ರೇಲಿಯರ ಒಂದು ಗುಂಪನ್ನು ನಮ್ಮ ಮಡಿಲಲ್ಲಿಟ್ಟುಕೊಂಡು ಆಶ್ರಯ ನೀಡಿದ್ದೇವೆ ಎಂದು ಹೇಳಲು ನನಗೆ ಹೆಮ್ಮೆ. ಘನವಾದ ಜರತುಷ್ಟ್ರ ಜನಾಂಗದ ಅವಶೇಷಕ್ಕೆ ಆಶ್ರಯವಿತ್ತ ಹಾಗೂ ಅವರನ್ನು ಈಗಲೂ ಪೋಷಿಸುತ್ತಿರುವ ಧರ್ಮಕ್ಕೆ ನಾನು ಸೇರಿದವನೆಂಬುದು ನನ್ನ ಹೆಮ್ಮೆ."

"ಭಗವಂತನ ಕೃಪೆಯ ಗಾಳಿ ಯಾವಾಗಲೂ ಬೀಸುತ್ತಿರುತ್ತದೆ. ಆದರೆ ನಾವು ನಮ್ಮ ಹಡಗಿನ ಹಾಯಿಪಟವನ್ನು ತೆರೆಯಬೇಕಷ್ಟೆ". ಹೀಗೆಂದವರು ಅವತಾರವರಿಷ್ಠರಾದ ಶ್ರೀರಾಮಕೃಷ್ಣ ಪರಮಹಂಸರು. ಈ ಸತ್ಯವಾಕ್ಯದಲ್ಲಿ ಅಚಲವಾದ ಶ್ರದ್ಧೆಯನ್ನು ಹೊಂದಿದ್ದವರೆಂದರೆ ಸ್ವಾಮಿ ವಿವೇಕಾನಂದರು.

**'ಜೀವವೇ ಶಿವ; ನರನೇ ನಾರಾಯಣ'** ಎಂಬ ಆಶಯ ಹೊತ್ತ ಅಪರೂಪದ ಮಹಾಸಂಸ್ಥೆ ಶ್ರೀರಾಮಕೃಷ್ಣ ಮಹಾಸಂಘ. ಕಳೆದೊಂದು ಶತಮಾನದಲ್ಲಿ ಆತ್ಮಸಾಧನೆ, ಜ್ಞಾನಪ್ರಸಾರ, ಶಿಕ್ಷಣ, ಆರೋಗ್ಯ ಮೊದಲಾದ ಅನೇಕ ಕ್ಷೇತ್ರಗಳಲ್ಲಿ ರಾಮಕೃಷ್ಣ ಮಹಾಸಂಘವು ದೇಶವಿದೇಶಗಳಲ್ಲಿ ಶ್ರದ್ಧೆಯಿಂದ, ಪ್ರಾಮಾಣಿಕತೆಯಿಂದ ಸಲ್ಲಿಸುತ್ತಿರುವ ಸೇವೆ ಅದ್ವಿತೀಯವಾದದ್ದು. ಮಾನವಮೈತ್ರಿ, ಸಾಮರಸ್ಯಗಳ ಅನುಪಮ ಕೊಂಡಿಯಂತಿರುವ ಈ ಸಂಸ್ಥೆಯ ಅನೇಕ ಶಾಖೆಗಳು ಭಾರತಾದ್ಯಂತವೂ ವ್ಯಾಪಿಸಿದ್ದು, ಅದ್ಭುತವಾದ ರೀತಿಯಲ್ಲಿ ಸಮಾಜಮುಖಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿವೆ. ಇಂದು ಇಲ್ಲಿ ಆಯೋಜಿತವಾಗಿರುವ ಈ ಬೃಹತ್ ಸಮ್ಮೇಳನ ಅಂಥ ನೂರಾರು ಯೋಜನೆಗಳಲ್ಲಿ ಒಂದೆನ್ನಬಹುದು.

ಶ್ರೀವಿವೇಕಾನಂದರ ಇಂಥ ಮಹತ್ವಪೂರ್ಣ ವಿಚಾರಧಾರೆಯನ್ನು ನಾಡಿನ ಮೂಲೆಮೂಲೆಗೂ ಕೊಂಡೊಯ್ಯುವ ಆವಶ್ಯಕತೆ ಎಂದಿಗಿಂತ ಇಂದು ಹೆಚ್ಚಾಗಿದೆ. ಈ ಆಧ್ಯಾತ್ಮಿಕ ಸಮ್ಮಿಲನದಲ್ಲಿ ಈ ವಿಷಯ ಕುರಿತ ಚಿಂತನ ಮಂಥನ ನಡೆಸಲು ಉದ್ದೇಶಿಸಿರುವುದು ಸಾಂದರ್ಭಿಕವೂ, ಪ್ರಸ್ತುತವೂ ಆಗಿದೆ.

ಇಂಥದೊಂದು ಸಮ್ಮಿಲನವನ್ನು ಇಷ್ಟು ಅಚ್ಚುಕಟ್ಟಾಗಿ ಏರ್ಪಡಿಸಿರುವ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಹಾಗೂ ಇನ್ನಿತರ ಎಲ್ಲ ಸಾಧುವರ್ಗದವರಿಗೂ ನಮ್ಮೆಲ್ಲರ ಅಭಿನಂದನೆಗಳು ಸಲ್ಲುತ್ತವೆ.

ಇದೇ ಸಂದರ್ಭದಲ್ಲಿ ವಿಶೇಷವಾಗಿ ಹೊರತಂದಿರುವ ಸ್ಮರಣ ಸಂಚಿಕೆ 'ವಿವೇಕ ಜಾಗೃತಿ.' ಅನೇಕ ವಿದ್ವತ್ಪೂರ್ಣ ಲೇಖನಗಳನ್ನೊಳಗೊಂಡ ಈ ಸುಂದರ ಸಂಚಿಕೆ ಈಗಷ್ಟೇ ಬಿಡುಗಡೆಯಾಗಿದೆ.

ಆನಂದವೇ ಆತ್ಮಬೋಧ; ನಿಸ್ಸಂಗ ನಿರಪೇಕ್ಷ ಮನೋಸ್ಥಿತಿ. ಸಂಸ್ಕೃತಿಯ ಈ ಮೂಲರೂಪವೇ ಸದ್ಭಾವನೆ, ಸದಾಚಾರಗಳ ಪ್ರತಿಬಿಂಬ. ಇಂಥ ಆನಂದ, ಶಾಂತಿ, ಸ್ಫೂರ್ತಿ, ಉಲ್ಲಾಸಗಳು ಜನಮನದಲ್ಲಿ ಮೈದೋರಲಿ; ಪ್ರಜ್ಞೆಯ ಎತ್ತರ ಬಿತ್ತರಗಳು ಚೈತನ್ಯ ರೂಪದಲ್ಲಿ ಔನ್ನತ್ಯವನ್ನು ಸಾಧಿಸಲಿ.

**ಶುಭವಾದುದನ್ನೇ ನಮ್ಮ ಕಿವಿ ಆಲಿಸಲಿ; ಪೂಜಾರ್ಹವಾಗಿ ಮಂಗಳವಾದುದನ್ನೇ ನಮ್ಮ ಕಣ್ಣು ನೋಡಲಿ; ದೃಢ ದೇಹದಿಂದಲೂ, ಆನಂದದಿಂದಲೂ ನಮ್ಮ ಜೀವಮಾನ ಸುಖಮಯವಾಗಿ ಸಾಗಲಿ.**

ಎಂದು ಆಶಿಸುತ್ತ ನಾಲ್ಕು ದಿನಗಳ ಈ ಅರ್ಥಪೂರ್ಣ ಆಧ್ಯಾತ್ಮಿಕ ಸಮ್ಮಿಲನ ಯಶಸ್ವಿಯಾಗಿ ನೆರವೇರಲೆಂದು ಶುಭ ಕೋರುತ್ತ, ಭಗವಂತನ ಕೃಪೆ ಸರ್ವರಿಗೂ ಸದಾ ಕಾಲ ಇರಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

150ನೇ ಜನ್ಮದಿನದಂದು
**ಯುಗಪುರುಷ ಸ್ವಾಮಿ ವಿವೇಕಾನಂದ**ರಿಗೆ
ನಮ್ಮ ಕೋಟಿ ನಮನಗಳು



## ಕೆಬಿಎಲ್ ಗಿಫ್ಟ್ ಕಾರ್ಡ್

ನಿಮ್ಮ ಪ್ರೀತಿ ಪಾತ್ರರಿಗೆ ಗಿಫ್ಟ್ ನೀಡುವ ಒಂದು ಒಳ್ಳೆಯ ವಿಧಾನ




₹500/-ರಿಂದ ₹25,000/-ದ ವರೆಗಿನ ಕಾರ್ಡ್‌ಗಳು ಲಭ್ಯ

ನಿಮ್ಮ ಪ್ರೀತಿ ಪಾತ್ರರೇ ತಮ್ಮ ಗಿಫ್ಟ್‌ನ್ನು
ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ

ಆನ್‌ಲೈನ್ ಮೂಲಕ ರೆಸ್ಟೊರೆಂಟ್‌ಗಳಲ್ಲಿ ಹಾಗೂ ಸೂಪರ್ ಬಜಾರ್‌ಗಳಲ್ಲಿ ಸುಲಭವಾಗಿ ಉಪಯೋಗಿಸಬಹುದು.

## ಕೆಬಿಎಲ್ ಅಪ್ನಾ ಘರ್



### ನಿಮ್ಮ ಕನಸಿನ ಮನೆ ನಿಮ್ಮದಾಗುವ ಸಮಯ

- ಗೃಹ ನಿರ್ಮಾಣ, ಪೂರ್ವನಿರ್ಮಿತವಾದ ಗೃಹ ಅಥವಾ ಫ್ಲಾಟ್ ಖರೀದಿಗೆ
- ನಿವೇಶನ ಖರೀದಿ + ಗೃಹ ನಿರ್ಮಾಣ / ವಾಸವಿರುವ ಗೃಹ / ಫ್ಲಾಟ್ - ನವೀಕರಣ / ದುರಸ್ತಿ / ವಿಸ್ತರಣಾ ಕಾರ್ಯ / ಪುನರ್‌ನಿರ್ಮಾಣಕ್ಕೆ

## ಕೆಬಿಎಲ್ ಕಾರು ಲೋನ್




- ಆಕರ್ಷಕ ಬಡ್ಡಿದರ
- ಸುಲಭ ಕಂತುಗಳಲ್ಲಿ ಮರುಪಾವತಿ ಮಾಡಿರಿ.

ವಾಹನ ತೆರಿಗೆ ಮತ್ತು ವಿಮೆಯ ಹೊರತಾಗಿ
ಶೇ. 85 ರವರೆಗೆ ಸಾಲ ಸೌಲಭ್ಯ /
ಸೆಕೆಂಡ್ ಹ್ಯಾಂಡ್ ಕಾರುಗಳಿಗೂ ಸಾಲದ ಸೌಲಭ್ಯವಿದೆ

ಕರ್ಣಾಟಕ ಬ್ಯಾಂಕ್‌ನ

## ಗೋಲ್ಡ್ ಲೋನ್

(ಚಿನ್ನಾಭರಣ ಸಾಲ)

**ಕಡಿಮೆ ಚಿನ್ನ - ಅಧಿಕ ಸಾಲ**

ಕ್ಷಿಪ್ರ ಮಂಜೂರಾತಿ



ಆಕರ್ಷಕ ಬಡ್ಡಿದರ

ಕೃಷಿಕರಿಗೆ "ಅಗ್ರಿ ಗೋಲ್ಡ್"
ಓವರ್‌ಡ್ರಾಫ್ಟ್ / ಏಕ ಕಂತಿನ ಮರುಪಾವತಿ ಸೌಲಭ್ಯ

ಷರತ್ತುಗಳು ಅನ್ವಯಿಸುತ್ತವೆ.

ಹೆಚ್ಚಿನ ಮಾಹಿತಿಗಾಗಿ ಟೋಲ್ ಫ್ರೀ ಸಂಖ್ಯೆ 1800 425 1444ಗೆ ಕರೆ ಮಾಡಿ ಅಥವಾ ನಿಮ್ಮ ಸಮೀಪದ ಶಾಖೆಯನ್ನು ಸಂಪರ್ಕಿಸಿ

# ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

# ಇಂದಿನ ಶಾಲಾಕಾಲೇಜಿನ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದರ ಹಿತವಚನ



ಸ್ವಾಮಿ ರಾಘವೇಶಾನಂದ

**ಸ್ವಾಮಿ ವಿವೇಕಾನಂದರು ಯುವಜನತೆಗೆ, ಅದರಲ್ಲೂ, ವಿದ್ಯಾರ್ಥಿಗಳಿಗೆ ನೀಡಿರುವ ಬೋಧನೆಗಳು ಅಮೂಲ್ಯವಾದುವು. ಅವು ಲಕ್ಷಾಂತರ ವಿದ್ಯಾರ್ಥಿಗಳ ಜೀವನವನ್ನು ರೂಪಿಸುತ್ತಿವೆ. ಅವುಗಳ ಸ್ಥೂಲ ಪರಿಚಯ ನಮ್ಮ ವಿದ್ಯಾರ್ಥಿಗಳಿಗೆ ಅತ್ಯವಶ್ಯ. ಇದನ್ನು ಸ್ವಾರಸ್ಯಕರವಾಗಿ ತಿಳಿಸಿಕೊಟ್ಟಿರುವ ಸ್ವಾಮೀಜಿಯವರು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.**


ಶಿಕ್ಷಣ ಎಂದರೇನು? ಶಿಕ್ಷಣ ಅಥವಾ ವಿದ್ಯಾಭ್ಯಾಸದ ಗುರಿ ಏನಾಗಿರಬೇಕು? ಎಂತಹ ಶಿಕ್ಷಣ ವ್ಯವಸ್ಥೆ ಸಮರ್ಪಕ ಎಂದೆನಿಸಿಕೊಳ್ಳುತ್ತದೆ? ಇಂತಹ ಪ್ರಶ್ನೆಗಳಿಗೆ ಸ್ವಾಮಿ ವಿವೇಕಾನಂದರ ಬಳಿ ನಿಖರವಾದ ಉತ್ತರವನ್ನು ಕಾಣಬಹುದು. ಸ್ವಾಮೀಜಿಯವರ ಜೀವನಚರಿತ್ರೆಯನ್ನು ಓದುವುದರ ಮೂಲಕ, 'ಸರಿಯಾದ ವಿದ್ಯಾಭ್ಯಾಸ ಹೇಗಿರಬೇಕು?' ಎಂದು ನಾವು ತಿಳಿಯಬಹುದು.

ಸ್ವಾಮೀಜಿ ಹೇಳುತ್ತಾರೆ, "ಬರೀ ಪುಸ್ತಕಗಳನ್ನು ಓದುವುದು, ಕಂಠಪಾಠ ಮಾಡಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು, ಅನೇಕ ವಿಷಯಗಳ ಬಗೆಗೆ ಮಾಹಿತಿಗಳನ್ನು ಸಂಗ್ರಹಿಸುವುದು– ಇವು ಶಿಕ್ಷಣ ಎಂದು ಅನಿಸಿಕೊಳ್ಳುವುದಿಲ್ಲ. ಆದರೆ ಒಳ್ಳೆಯ ಚಾರಿತ್ರ್ಯ ನಿರ್ಮಾಣ ಮಾಡಬಲ್ಲಂತಹ, ಮಾನಸಿಕ ಶಕ್ತಿಯನ್ನು ಹೆಚ್ಚಿಸಬಲ್ಲಂತಹ, ಸತ್ಪ್ರಜೆಗಳನ್ನು ನಿರ್ಮಾಣ ಮಾಡಬಲ್ಲಂತಹ, ರಾಷ್ಟ್ರಾಭಿವೃದ್ಧಿಗೆ – ಪುನರುಜ್ಜೀವನಕ್ಕೆ ನಾಂದಿಯಾಗಬಲ್ಲಂತಹ ಮಾಧ್ಯಮವೇ ಶಿಕ್ಷಣ."

ಮೇಲೆ ಹೇಳಿದ ಶಿಕ್ಷಣ ಕುರಿತಾದ ಸ್ವಾಮೀಜಿಯವರ ಮಾನದಂಡಗಳು ಇಂದಿನ ಸಮಾಜದಲ್ಲಿ ಎಷ್ಟು ಪ್ರಸ್ತುತ ನೋಡಿ! ಆದರೆ ಅವು ಪ್ರಚಲಿತದಲ್ಲಿ ಇವೆಯೇ? ಇದ್ದರೆ ಅದರಿಂದ ಸಮಾಜಕ್ಕಾಗುವ ಒಳಿತಾದರೂ ಏನು? ಇಂತಹ ಶಿಕ್ಷಣಪದ್ಧತಿ ಇಲ್ಲದಿದ್ದರೆ ಅದನ್ನು ಜಾರಿಗೆ ತರುವುದು ಹೇಗೆ? ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಅವಶ್ಯ. ಇಂದಿನ ಶಿಕ್ಷಣಪದ್ಧತಿಯನ್ನು ಪರಿಶೀಲಿಸಿದರೆ, ಸ್ವಾಮೀಜಿಯವರ 'ಶಿಕ್ಷಣವಿನ್ಯಾಸ' ಅದರಲ್ಲಿ ಕಂಡುಬರುವುದಿಲ್ಲ. ನಾವೆಲ್ಲ ಸಹಜವಾಗಿ ಮಾಡುವುದು ಏನು? ಪಠ್ಯವಿಷಯಗಳನ್ನು ಕಂಠಪಾಠ ಮಾಡಿ, ಅವುಗಳನ್ನು ಪರೀಕ್ಷೆಗಳಲ್ಲಿ ಬರೆದು, ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂದಿನ ತರಗತಿಗೆ ಹೋಗಿ ಹಿಂದೆ ಕಲಿತದ್ದನ್ನೆಲ್ಲಾ ಮರೆಯುತ್ತೇವೆ. ಹೀಗೆ ವರ್ಷ, ವರ್ಷ ಕಲಿತು ಪಡೆದದ್ದೇನನ್ನು? ಒಂದು Degree Certificate. ಇಂತಹ ಒಣ Certificate ಪಡೆದು ಎಷ್ಟೋ ಯುವಕ ಯುವತಿಯರ ಸ್ಥಿತಿ ಶೋಚನಿಯವಾಗಿದೆ, ಕಾರಣ, ಕೈಯಲ್ಲಿ Certificate ಇದ್ದರೂ ತಲೆಯಲ್ಲಿ ಸತ್ವವಿಲ್ಲ. ಮತ್ತೊಂದು ಕಾರಣವೇನೆಂದರೆ ಸಮರ್ಪಕವಾದ, ಸರ್ವತೋಮುಖವಾದ ವ್ಯಕ್ತಿತ್ವವನ್ನು ನಿರ್ಮಾಣ ಮಾಡಬಲ್ಲಂತಹ ಒಳ್ಳೆಯ ಸುಸಜ್ಜಿತ ಶಿಕ್ಷಣದ ಮಾದರಿ ನಮ್ಮಲ್ಲಿ ಇಲ್ಲದಿರುವುದು.

ಸರಿ, ಇಂತಹ ಕಠಿಣ ಪರಿಸ್ಥಿತಿಯಿಂದ ಪಾರಾಗುವುದು ಹೇಗೆ? ಏನನ್ನು ಮಾಡಿದರೆ ಒಳ್ಳೆಯದು ಎಂದು ನಾವು ಈಗ ವಿವೇಚಿಸಬೇಕು.

ಮೊದಲನೆಯದಾಗಿ ಸ್ವಾಮೀಜಿ ಹೇಳುತ್ತಾರೆ, ಶಿಕ್ಷಣದ ಮೂಲಕ ನಾವು ವಿದ್ಯಾರ್ಥಿಗಳಿಗೆ ಸಕಾರಾತ್ಮಕ ವಿಷಯಗಳನ್ನು ತಿಳಿಸಿ ಅವರನ್ನು ಶಕ್ತಿಶಾಲಿಗಳನ್ನಾಗಿ ಮಾಡಬೇಕೇ ಹೊರತು, ನಕಾರಾತ್ಮಕವಾದ ವಿಷಯಗಳನ್ನಲ್ಲ. ಉದಾಹರಣೆಗೆ ಒಬ್ಬ ಹುಡುಗ ಸರಿಯಾಗಿ ಓದಲಿಲ್ಲ ಎಂದುಕೊಳ್ಳೋಣ, ಆಗ ಅವನ ಸುತ್ತ ಎಲ್ಲರೂ, "ನೀನು ಯಾವುದಕ್ಕೂ ಲಾಯಕ್ಕಿಲ್ಲ, 'Simply waste' ಎಂದು ಹೇಳಿ ಅವನ ಆತ್ಮವಿಶ್ವಾಸವನ್ನು ಕುಗ್ಗಿಸಿದರೆ ಅವನಲ್ಲಿ ಅದು ಕೆಟ್ಟ ಪರಿಣಾಮವನ್ನೇ ಬೀರುತ್ತದೆ. ತರಗತಿಯಲ್ಲಿ ಸರಿಯಾಗಿ ಓದದಿದ್ದರೆ ಮಕ್ಕಳು ದಡ್ಡರೆಂಬುದು ತಪ್ಪುಕಲ್ಪನೆ. ಉದಾಹರಣೆಗೆ, ಒಬ್ಬ ಹಿರಿಯ ಗಣಿತ ಮೇಧಾವಿಯ ಜೀವನವನ್ನೇ ನೋಡೋಣ. ಈತ ತಮಿಳುನಾಡಿನ ಈರೋಡ್ ಎಂಬಲ್ಲಿ ಒಂದು ಕಡು ಬಡ



ಕುಟುಂಬವೊಂದರಲ್ಲಿ ಜನಿಸಿದರು. ಆರ್ಥಿಕವಾಗಿ ದುರ್ಬಲವಾಗಿದ್ದ ಕುಟುಂಬ ಅವರದ್ದು. ಬಹು ಕಷ್ಟದಿಂದಲೇ ಶಾಲಾ ವಿದ್ಯಾಭ್ಯಾಸವನ್ನು ಮುಗಿಸಿದರು. ಬಾಲ್ಯದಿಂದಲೇ ಅವರಿಗೆ ಗಣಿತವೆಂದರೆ ಹುಚ್ಚು. ಚಿಕ್ಕ ವಯಸ್ಸಿನಲ್ಲಿಯೇ ಗಣಿತದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿದರು. ಇವರಿಗೆ ಮದ್ರಾಸ್ ವಿಶ್ವವಿದ್ಯಾನಿಲಯವನ್ನು ಸೇರಿಕೊಂಡು, ಗಣಿತದಲ್ಲಿ ಸಂಶೋಧನೆ ಮಾಡಬೇಕೆಂಬ ಹಂಬಲವಿತ್ತು. ಆದರೆ ವಿಶ್ವವಿದ್ಯಾನಿಲಯದಲ್ಲಿ ಸ್ಥಾನ ಸಿಗಬೇಕಿದ್ದರೆ F.A. Examination ನಲ್ಲಿ ಪಾಸ್ ಆಗಬೇಕಿತ್ತು. ಗಣಿತವೇನೋ ಇವರಿಗೆ ಆಟ. ಆದರೆ ಉಳಿದ Subjects ಎಲ್ಲ ಕಾಟ. F.A Examination ನಲ್ಲಿ Fail ಆದರು. ಹೀಗಾಗಿ ವಿಶ್ವವಿದ್ಯಾನಿಲಯದ ಕನಸು ಕನಸೇ ಆಯಿತು.

ಜೀವನೋಪಾಯಕ್ಕೆ ಒಂದು ಕೆಲಸ ಹುಡುಕಿದರು. ಬಡತನ, ಕುಟುಂಬವನ್ನು ಕಾಪಾಡುವ ಭಾರ, ಕೆಲಸದ ಒತ್ತಡ– ಇವೆಲ್ಲದರ ಮಧ್ಯೆಯೂ ಗಣಿತ ಸಂಶೋಧನೆ ಮುಂದುವರೆಯುತ್ತಿತ್ತು. ಹೊಸ ಹೊಸ ವಿಧಾನಗಳನ್ನು ಕಂಡುಹಿಡಿದು ಅವುಗಳನ್ನು ಇಂಗ್ಲೆಂಡಿನಲ್ಲಿ ಇದ್ದ ಪ್ರೊ. ಹಾರ್ಡಿ ಎಂಬುವವರಿಗೆ ಕಳುಹಿಸುತ್ತಿದ್ದರು. ಇವನ್ನೆಲ್ಲ ಓದಿದ್ದ ಪ್ರೊ. ಹಾರ್ಡಿ, "ಈತ ಸಾಧಾರಣನಲ್ಲ, ಮಹಾ ಮೇಧಾವಿ" ಎಂದು ನಿರ್ಧರಿಸಿ, ಅವರನ್ನು ಲಂಡನ್ನಿಗೆ ಕರೆಸಿಕೊಂಡರು. ಅವರಿಂದ ಅನೇಕ ರೀತಿಯ ಗಣಿತ ಜ್ಞಾನವನ್ನು ಪಡೆದು, ಭಾರತಕ್ಕೆ ವಾಪಸ್ಸು ಕಳಿಸಿಕೊಟ್ಟರು. ಇವರೇ ಗಣಿತ ಮೇಧಾವಿ ಶ್ರೀನಿವಾಸ ರಾಮಾನುಜಂ. ಚೆನ್ನೈ ವಿಶ್ವವಿದ್ಯಾನಿಲಯ ಇವರನ್ನು ತಿರಸ್ಕರಿಸಿದರೂ ಇವರು ಕುಗ್ಗಲಿಲ್ಲ, ಲಂಡನ್ನಿನ ಜ್ಞಾನದೇಗುಲದ ಬಾಗಿಲು ಇವರನ್ನು ಸ್ವಾಗತಿಸಿತು. ಇವರ ಮೇಧಾಶಕ್ತಿಯನ್ನು ಗುರುತಿಸದೇ ಇದ್ದದ್ದು ನಮ್ಮ ಶಿಕ್ಷಣ ಪದ್ಧತಿಯ ಲೋಪವೋ, ಏನೋ? ಆದರೆ ರಾಮಾನುಜಂ ಮೊದಲೇ ಬೆಳಕಿಗೆ ಬಂದಿದ್ದರೆ ಗಣಿತಶಾಸ್ತ್ರದಲ್ಲಿನ್ನೂ ಹೊಸ ಶಾಸ್ತ್ರಜ್ಞಾನ ಮೂಡುತ್ತಿದುದರಲ್ಲಿ ಸಂದೇಹವಿರಲಿಲ್ಲ. ರಾಮಾನುಜಂರವರ ಜೀವನದಂತೆ ಹಲವಾರು ಉದಾಹರಣೆಗಳನ್ನು ಇನ್ನೂ ಇತರ ಮಹಾತ್ಮರ ಜೀವನದಲ್ಲಿ ಕಾಣಬಹುದು.

ಇದರಂತೆಯೇ ಇರುವ ಒಂದು ಅದ್ಭುತವನ್ನು ಥಾಮಸ್ ಆಲ್ವಾ ಎಡಿಸನ್‌ನ ಜೀವನದಲ್ಲಿ ಕಾಣಬಹುದು. ಆತ ಜಗತ್ತಿನ ಅತಿ ಹಿರಿಯ ವಿಜ್ಞಾನಿ, ಅನ್ವೇಷಕ. ಬಾಲಕನಾಗಿದ್ದಾಗ ಅವನು ಬುದ್ಧಿವಂತ ಹುಡುಗನಲ್ಲ ಎಂದು ಶಾಲೆಯವರು ಅವನನ್ನು ಹೊರದೂಡಿದರು. ಅವನ ತಾಯಿ ಶಾಲೆಯವರಿಗೆ, "ನಾನು ಇವನನ್ನು ಜಗತ್ತೇ ಮರೆಯದ ವ್ಯಕ್ತಿಯನ್ನಾಗಿ ಮಾಡುತ್ತೇನೆ" ಎಂದು ಹೇಳಿದಳು. ಅಂದಿನಿಂದ ತಾಯಿಯೇ ಮಗನಿಗೆ ವಿದ್ಯೆಯನ್ನು ಕಲಿಸಿದಳು. ಜಗತ್ತೇ ಬೆರಗಾಗುವ ಹಿರಿಯ ವಿಜ್ಞಾನಿಯನ್ನಾಗಿ ಅವನನ್ನು ರೂಪಿಸಿದಳು. ಜಗತ್ತೇ ತಲೆಬಾಗಿತು, ಅವನ ಜ್ಞಾನಕ್ಕೆ. ಎಂತಹ ಅದ್ಭುತ ನೋಡಿ!

ಒಬ್ಬಾತ ಎಡಿಸನ್ ಬಳಿ ಬಂದ. "ನೀವು ಯಾರಿಂದಲೂ ಪಾಠ ಕಲಿಯದೆ ಸ್ವಪರಿಶ್ರಮದಿಂದ ಶ್ರೇಷ್ಠ ವಿಜ್ಞಾನಿಯಾದಂತೆ, ನಾನೂ ಆಗಬೇಕೆಂದಿರುವೆ. ನನಗೆ ಏನಾದರೂ ಸಲಹೆ ನೀಡಿ" ಎಂದು ಕೇಳಿದ. ಅದಕ್ಕೆ ಅವರು, "ನನ್ನ ತಾಯಿ ಹೇಳಿಕೊಟ್ಟ ಒಂದು ಮಂತ್ರವನ್ನು ನಿನಗೆ ಹೇಳಿಕೊಡುತ್ತೇನೆ. ಅದೇನೆಂದರೆ